ಆಳಂದ್ ಸಕ್ಕರೆ ಕಾರ್ಖಾನೆ ಕಟ್ಟಡದ ನಿರ್ಮಾಣ

೧೪೬೩. ಶ್ರೀ ಶರಣಬಸಪ್ಪ ಪಾಲಿ ಪಾಟೀಲ್ (ಆಳಂದ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಆಳಂದ ಸಕ್ಕರೆ ಕಾರ್ಖಾನೆ ಕಟ್ಟಡ ನಿರ್ಮಾಣ ಪ್ರಾರಂಭವಾಗಿದೆಯೇ?

ಆ) ಹಾಗಿದ್ದಲ್ಲಿ ಎಂದು ಪ್ರಾರಂಭವಾಯಿತು?

ಇ) ಈ ಕಟ್ಟಡಗಳ ನಿರ್ಮಾಣ ಯಾರಿಗೆ ಕೊಡಲಾಗಿದೆ?

ಈ) ಸದರಿ ಕಂಟ್ರಾಕ್ಟ್‌ದಾರರಿಗೆ ಕಾರ್ಖಾನೆಯಿಂದ ಮುಂಗಡ ರೂಪದಲ್ಲಿ ಹಣವನ್ನೇನಾದರೂ ಕೊಡಲಾಗಿದೆಯೇ?

ಉ) ಹಾಗಿದ್ದಲ್ಲಿ ಎಷ್ಟೆಷ್ಟು ಕೊಡಲಾಗಿದೆ? ವ್ಯಕ್ತಿವಾರು ವಿವರಗಳನ್ನು ನೀಡುವುದು?

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರಿ ಸಚಿವರು).—

ಅ) ಹೌದು.

ಆ) ಕಟ್ಟಡ ಕಟ್ಟುವ ಕೆಲಸವನ್ನು ಪ್ರಾರಂಭಿಸಲಾದ ದಿನಾಂಕ ಹಾಗೂ ಇತರ ವಿವರಗಳನ್ನು ಕೆಳಗೆ ತಿಳಿಸಲಾಗಿದೆ.

ಕ್ರಮ ಸಂಖ್ಯೆ	ಕಟ್ಟಡದ ವಿವರ	ಪ್ರಾರಂಭದ ದಿನಾಂಕ
೧.	ಸಕ್ಕರೆ ಗೋಡೌನು	೨೮-೧೧-೮೫
೨.	ಅತಿಥಿ ಗೃಹ	೨೮-೧೧-೮೫
೩.	ಬ್ಯಾಚುಲರ್ಸ್ ಕ್ವಾರ್ಟರ್ಸ್	೨೮-೧೧-೮೫

ಇ) ಕ್ರಮಸಂಖ್ಯೆ	ಕಟ್ಟಡದ ವಿವರ	ಕಂಟ್ರಾಕ್ಟ್‌ದಾರರ ಹೆಸರು
೧.	ಸಕ್ಕರೆ ಗೋಡೌನು	ಶ್ರೀ ಹನುಮಂತಪ್ಪ ಕಾಂಬಾರ್
೨.	ಅತಿಥಿ ಗೃಹ	ಶ್ರೀ ಶಿವರಾಯ್ಯ ಪಾಟೀಲ್
೩.	ಬ್ಯಾಚುಲರ್ಸ್ ಕ್ವಾರ್ಟರ್ಸ್	ಶ್ರೀಬಾಬುರಾವ್ ಫುಲಾರಿ

ಈ) ಕಂಟ್ರಾಕ್ಟ್‌ದಾರರಿಗೆ ಮುಂಗಡ ಹಣ ಕೊಟ್ಟಿರುವುದಿಲ್ಲ ಆದರೆ ಅವರು ಶೇಖರಣೆ ಮಾಡಿದ ಮಾಲಿನ ಮೇಲೆ ಶೇ. ೭೫ರಷ್ಟು ಮುಂಗಡ ಹಣ ಕೊಡಲಾಗುತ್ತಿದೆ.

ಉ) ಮಾಲಿನ ಮೇಲೆ ಕೊಟ್ಟ ಮುಂಗಡದ ಹಣ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಯಾವ ಕೆಲಸಕ್ಕಾಗಿ ಮೂಲಧನ ಸಂಗ್ರಹಣೆ ಮಾಡಲಾಗಿದೆ	ಕಂಟ್ರಾಕ್ಟರ್ ಹೆಸರು	ಕೊಟ್ಟಿರುವ ಹಣ
೧.	ಸಕ್ಕರೆ ಗೋಡೌನು ನಿರ್ಮಾಣಕ್ಕಾಗಿ	ಶ್ರೀ ಹನುಮಂತಪ್ಪ ಕಾಂಬಾರ	೫೦೦೦-೦೦
೨.	ಅತಿಥಿಗೃಹ ನಿರ್ಮಾಣಕ್ಕಾಗಿ	ಶ್ರೀ ಶಿವರಾಯ ಪಾಟೀಲ	೨೫೦೦೦-೦೦
೩.	ಬ್ಯಾಚುಲರ್ಸ್‌ಕ್ವಾರ್ಟರ್ಸ್ ನಿರ್ಮಾಣಕ್ಕಾಗಿ	ಶ್ರೀ ಬಾಬುರಾವ್ ಫುಲಾರಿ	೫೦೦೦-೦೦